CC No.1497/2020

**SCCH-09** **PW-1**

**<u>ದಿನಾಂಕಃ06.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ದೂರಿನಲ್ಲಿ ತಿಳಿಸಿರುವ ವಿಳಾಸ ನಮ್ಮ ಅಂಗಡಿಯ ವಿಳಾಸ ಎಂದರೆ ಸರಿ. ಕೆ.ಎನ್. ಗೌಡ್ರು ಪ್ರಾವಿಜನ್ ಸ್ಟೋರ್ ನ ಮಾಲೀಕರು ಎಂದು ತೋರಿಸಲು ದಾಖಲೆ ನೀಡಿದ್ದೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರು ದಾಖಲೆಯನ್ನು ನೀಡಿರಬಹುದು ನನಗೆ ನೆನಪಿಲ್ಲ. ಆರೋಪಿಯು ಕಳೆದ 4-5 ವರ್ಷಗಳಿಂದ ಪರಿಚಯವಿದೆ. ಆರೋಪಿಯು ವಿಜಯನಗರದಲ್ಲಿರುವ ನಮ್ಮ ಬಾಮೈದುನನ ತರಕಾರಿ ಅಂಗಡಿಗೆ ಬರುತ್ತಿದ್ದಾಗ ಪರಿಚಯವಾಯಿತು. ಆರೋಪಿಯು ಪಿ.ಜಿ. ಹಾಸ್ಟೆಲ್ ನಡೆಸುತ್ತಿದ್ದ ಅದಕ್ಕೆ ತರಕಾರಿ ಖರೀದಿ ಮಾಡಲು ನಮ್ಮ ಬಾಮೈದುನನ ಅಂಗಡಿಗೆ ಬರುತ್ತಿದ್ದರು. ಅವರು ವಾಸವಾಗಿರುವ ವಿಳಾಸ ಗೊತ್ತಿಲ್ಲ, ಆದರೆ ಪಿ.ಜಿಯನ್ನು ನಾರಾಯಣಪ್ಪ ಬಿಲ್ಡಿಂಗ್‌ನಲ್ಲಿ ನಡೆಸುತ್ತಿದ್ದರು.

2. ಆರೋಪಿಯು ಅಕ್ಟೋಬರ್ 2019 ರಲ್ಲಿ ಹಣ ಕೇಳಿರುವಂತೆ ನನಗೆ ಕೇಳಿರುತ್ತಾನೆ, ಆದರೆ ಯಾವ ದಿನಾಂಕ ಎಂಬದು ನನಗೆ ನೆನಪಿಲ್ಲ. ಆರೋಪಿಯು ಯಾವ ಯಾವ ದಿನಸಿಗಳನ್ನು ನಮ್ಮ ಅಂಗಡಿಯಿಂದ ಖರೀದಿ ಮಾಡಿದರೆಂದು ದಾಖಲೆಗಳನ್ನು ಹಾಜರುಪಡಿಸಿಲ್ಲ. ಅಪರ್ಣ ಮ್ಯಾನ್ ಪವರ್ ಕನ್ಸಲ್ಟೆನ್ಸಿ ಗೆ ಸಾಲ ನೀಡಿದ್ದೇನೆ ಎಂದು ದೂರಿನಲ್ಲಿ ತಿಳಿಸಿರುತ್ತೇನೆ ಎಂದರೆ ಸಾಕ್ಷಿಯು ನಾನು ಅಪರ್ಣಾ ಎಂಬುವವರಿಗೆ ದಿನಸಿಯನ್ನು ಸಾಲವಾಗಿ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ದಿನಸಿಯನ್ನು ಖರೀದಿ ಮಾಡಿದ

ಬಿಲ್ಲನ್ನು ನಾನು ಆರೋಪಿಗೆ ನೀಡಿರುತ್ತೇನೆ. ಸದರಿ ಬಿಲ್ಲು ನನ್ನ ಬಳಿ ಇರುವುದಿಲ್ಲ. ಅಕ್ಟೋಬರ್ 2019 ರಿಂದ ಯಾವ ಯಾವ ತಿಂಗಳು ಎಷ್ಟು ದಿನಸಿಯನ್ನು ಸಾಲಕ್ಕೆ ನೀಡಿರುತ್ತೇನೆ ಎಂದರೆ ನನಗೆ ನೆನಪಿಲ್ಲ. ಆರೋಪಿ ದಿನಸಿ ವಸ್ತುಗಳನ್ನು ಖರಿದಿ ಮಾಡಿದ ನಂತರ ಒಟ್ಟಾರೆಯಾಗಿ ನಿ.ಪಿ.1 ಚೆಕ್ಕನ್ನು ನೀಡಿರುತ್ತಾರೆ.

3. ನಿ.ಪಿ.1 ಚೆಕ್ಕನ್ನು ಆರೋಪಿ ಡಿಸೆಂಬರ್ 2019 ರಲ್ಲಿ ನೀಡಿರುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ಅಕ್ಟೋಬರ್ 2019 ಲ್ಲಿ ಚೆಕ್ಕನ್ನು ನೀಡಿರುತ್ತಾರೆ ಆ ಪೂರ್ವದಲ್ಲಿ ದಿನಸಿಯನ್ನು ಪಡೆದಿರುತ್ತಾರೆ. ನಿ.ಪಿ.1 ನ್ನು ಆರೋಪಿಯೇ ಬರೆದುಕೊಂಡು ಬಂದಿದ್ದಾರೆ. ನಿ.ಪಿ.1 ಚೆಕ್ಕಿನಲ್ಲಿರುವ ಸಹಿ ಮತ್ತು ಇತರೆ ಬರವಣಿಗೆಯಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ.

4. ಆರೋಪಿ ಪಿ.ಜಿ ನಡೆಸುತ್ತಿದ್ದ ವಿಳಾಸಕ್ಕೆ ನೋಟೀಸು ಕಳುಹಿಸಿದ್ದೇನೆ ಎಂದರೆ ಸರಿ. ಆರೋಪಿಯ ಮನೆಯ ವಿಳಾಸಕ್ಕೆ ನೋಟೀಸು ನೀಡದೆ ಅವರು ನಡೆಸುತ್ತಿದ್ದ ಪಿ.ಜಿ. ಹಾಸ್ಟೆಲ್ ವಿಳಾಸಕ್ಕೆ ಕಳುಹಿಸಿದೆ ಎಂದರೆ ಸರಿಯಲ್ಲ. ಆರೋಪಿಯು ನಿ.ಪಿ.3 ರಲ್ಲಿ ತಿಳಿಸಿರುವ ವಿಳಾಸದಲ್ಲಿ ವಾಸವಾಗಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಚೆಕ್ಕು ಬೌನ್ಸ್ ಆದ ನಂತರ ಆರೋಪಿಗೆ ವಿಷಯ ತಿಳಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರ ಮೊಬೈಲ್ಗೆ ಫೋನ್ ಮಾಡಿದ್ದೆ ಅವರು ಸ್ವೀಕರಿಸಲಿಲ್ಲ ಎಂದು ಉತ್ತರಿಸಿರುತ್ತಾರೆ. ಚೆಕ್ ಬೌನ್ಸ್ ಆದ ನಂತರ ಆರೋಪಿಗೆ ವಾಟ್ಸಪ್ ಮುಖಾಂತರ ಸಂದೇಶ ಕಳುಹಿಸಿದ್ದೇನೆ. ಸದರಿ ವಾಟ್ಸಪ್ ಸಂದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ.

**ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಸೋಮಶೇಖರ.ಎ)**
**ಎಸಿಎಂಎಂ ನ್ಯಾಯಾಧೀಶರು**
**ಲಘು ವ್ಯವಹಾರಗಳ ನ್ಯಾಯಾಲಯ**
**ಬೆಂಗಳೂರು**